## ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಮಾಡಿಸಲಾಯಿತು.

**ದಿಃ13.03.2026**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಪಿ ಎಂ ವಕೀಲರಿಂದಃ**

ವಾಣಿಜ್ಯ ವ್ಯವಹಾರ ಮಾಡಬೇಕಾದರೆ ಜಿ ಎಸ್ ಟಿ ನಂಬರ್ ಇರುತ್ತದೆ ಎಂದರೆ ಸರಿ. ನಾನು ಆರೋಪಿಯೊಂದಿಗೆ ಉತ್ಪನ್ನಗಳ ವ್ಯಾಪಾರ ವ್ಯವಹಾರ ಮಾಡಿರುವ ಬಗ್ಗೆ ದಾಖಲಾತಿಗಳು ಇರುತ್ತದೆ. ಆಯುರ್ವೇದಿಕ್ ಉತ್ಪನ್ನಗಳು ಇರುವುದರಿಂದ ಆರೋಪಿ ಜಿ ಎಸ್ ಟಿ ಬಿಲ್ ಗಳನ್ನು ನೀಡಿರುವುದಿಲ್ಲ. ನನ್ನ ಮತ್ತು ಆರೋಪಿ ನಡುವೆ ಸದರಿ ಯಾವುದೇ ವ್ಯವಹಾರವಾಗಿಲ್ಲ ಎಂದರೆ ಸರಿಯಲ್ಲ. ನನಗೆ ಕಳಲೆ ಗ್ರಾಮದಲ್ಲಿ ಸ ನಂ 91 ಮತ್ತು 92 ರಲ್ಲಿ ಒಟ್ಟು 3 ಎಕರೆ 9 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನಿನ ಮೇಲೆ 5 ಲಕ್ಷ ಸಾಲ ಇತ್ತು. ಆರೋಪಿ ಒಂದೂವರೆ ಸಾವಿರ ದಷ್ಟು ಉತ್ಪನ್ನಗಳನ್ನು ನೀಡಿರುತ್ತಾರೆ. ನಾನು ಆರೋಪಿಗೆ ಉತ್ಪನ್ನಗಳ ಖರೀದಿಗೆ ಮೂರುವರೆ ಲಕ್ಷ ಹಣ ನೀಡಿರುತ್ತೇನೆ. ನಂತರ ಉತ್ಪನ್ನಗಳನ್ನು ಪಡೆಯುವಾಗ ನಾನು ಆರೋಪಿಗೆ ಹಣ ಪಾವತಿ ಮಾಡಿ ಖರೀದಿ ಮಾಡಿರುತ್ತೇನೆ.

ಕಾರ್ಪೋರೇಷನ್ ಬ್ಯಾಂಕ್ ಈಗ ಯೂನಿಯನ್ ಬ್ಯಾಂಕ್ ಆಗಿದೆ ಎಂದರೆ ಸರಿ. ದಿಃ 01.05.2019 ರಿಂದ 31.12.2019 ರ ವರಗಿನ ಆರೋಪಿಯ ಅಕೌಂಟ್ ಸ್ಟೇಟ್ ಮೆಂಟ್ ನಲ್ಲಿ ನಾನು ದಿಃ 13.08.2019 ರಂದು ಆರೋಪಿ ಖಾತೆಗೆ ಹಣ ಜಮಾ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ನಾನು ಹಣ ಜಮಾ ಮಾಡಿರುತ್ತೇನೆ. ವಿಜಯ ಕುಮಾರ ನನ್ನ ಚಿಕ್ಕಮ್ಮನ ಮಗ ಇರುತ್ತಾರೆ. ಅವರು ಸೋಮವಾರಪೇಟೆ ನ್ಯಾಯಾಲಯದಲ್ಲಿ ಆರೋಪಿ ವಿರುದ್ದ ಚೆಕ್ ಕೇಸ ಹಾಕಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣ ವಜಾ ಆಗಿರುತ್ತದೆ ಎಂದರೆ ಗೊತ್ತಿಲ್ಲ. 2019 ರಲ್ಲಿ ನಾನು ಮತ್ತು ಆರೋಪಿ ಇಬ್ಬರು ಸೇರಿ ಶುಂಠಿ ವ್ಯಾಪಾರ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ಸದರಿ ವ್ಯವಹಾರದಲ್ಲಿ ನಮ್ಮಿಬ್ಬರ ನಡುವೆ ವೈಮನಸ್ಸು ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿ ತನ್ನ ಬೈಕ್ ನಲ್ಲಿ ಇಟ್ಟಿದ್ದ ಚೆಕ್ ಗಳನ್ನು ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿ ಯಾವುದೇ ಆಯುರ್ವೇದಿಕ್ ಉತ್ಪನ್ನಗಳನ್ನು ಮಾರಾಟ ಮಾಡುವುದಿಲ್ಲ ಮತ್ತು ನಾನು ಯಾವುದೇ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು

ಆರೋಪಿಗೆ ಯಾವುದೇ ಹಣ ಪಾವತಿ ಮಾಡಿಲ್ಲ ಮತ್ತು ಅವರು ನನಗೆ ಯಾವುದೇ ಚೆಕ್ ಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಚೆಕ್ ನಲ್ಲಿ ಸಹಿ ಸಹ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ನೋಟೀಸ್ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಚೆಕ್ ನ್ನು ಅವರಿಗೆ ಗೊತ್ತಿಲ್ಲದಾ ಹಾಗೇ ಬೈಕ್ ನಿಂದ ತೆಗೆದುಕೊಂಡು ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಯಿಂದ ಹಣ ಕಬಳಿಸಲು ಈ ಸುಳ್ಳು ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/–

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**